## ಕರ್ನಾಟಕ ಸರ್ಕಾರ

ಸಂಖ್ಯೆ:ಸಿಎಸ್‌ಡಿ-4:ಸಕ್ಕರೆ:ಹಂಚಿಕೆ:ಗ್ರಾ:(02):2010-11

ಜಿಲ್ಲಾ ಪಂಚಾಯತ ಕಾರ್ಯಾಲಯ
(ಆಹಾರ ) ರಾಯಚೂರು
ದಿನಾಂಕ:06-05-2010

## ಅಧಿಕೃತ ಜ್ಞಾಪನ

ವಿಷಯ:- 2010 ನೇ ಮೇ ಮಾಹೆಗೆ ರಾಯಚೂರು ಜಿಲ್ಲೆಯ ಗ್ರಾಮಾಂತರ ಪ್ರದೇಶದ ಬಿಪಿಎಲ್ ಮತ್ತು ಅಂತ್ಯೋದಯ ಪಡಿತರ ಚೀಟಿಗಳಿಗೆ ಲೆವಿ ಸಕ್ಕರೆ ಹಂಚಿಕೆ ಬಗ್ಗೆ.

ಉಲ್ಲೇಖ:- ಮಾನ್ಯ ಆಯುಕ್ತರು ಆನಾಸ ಮತ್ತು ಗ್ರಾ.ವ್ಯ.ಗಳ ಇಲಾಖೆ ಬೆಂಗಳೂರು ಇವರ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ:ಸಿಎಫ್‌ಎಸ್:ಸವಿ:III:ಸಕ್ಕರೆ:02:2010-11: ದಿನಾಂಕ:30-04-2010

*****

ಉಲ್ಲೇಖಿತ ಅಧಿಕೃತ ಜ್ಞಾಪನ ಪತ್ರದ ಮೂಲಕ ಮಾನ್ಯ ಆಯುಕ್ತರು ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಬೆಂಗಳೂರು ಇವರು ರಾಯಚೂರು ಜಿಲ್ಲೆಗೆ ಸಾರ್ವಜನಿಕ ವಿತರಣಾ ವ್ಯವಸ್ಥೆಯಡಿಯಲ್ಲಿ ಮೇ-2010ರ ಮಾಹೆಗಾಗಿ 2817.00 ಕ್ವಿಂಟಲ್ಸ ಮತ್ತು ಎಪ್ರೀಲ್-2010ನೇ ಮಾಹೆಯಲ್ಲಿ ಹೆಚ್ಚುವರಿಯಾಗಿ 6052.00ಕ್ವಿಂಟಲ್ ಒಟ್ಟು 8869.00 ಕ್ವಿಂಟಲ್ ಸಕ್ಕರೆಯನ್ನು ಬಿಡುಗಡೆ ಮಾಡಿ ಜಿಲ್ಲೆಯಲ್ಲಿ ಭಾವಚಿತ್ರ ಹೊಂದಿರುವ ಅಂತ್ಯೋದಯ , ನೆಮ್ಮದಿ ಪೂರ್ವ ಹಾಗೂ ನೆಮ್ಮದಿ ಅಕ್ಷಯ ಪಡಿತರ ಚೀಟಿಗಳಿಗೆ ತಲಾ 2 ಕೆ.ಜಿ.ಯಂತೆ ವಿತರಣೆ ಮಾಡಲು ಹಾಗೂ ಹಂಚಿಕೆ ನಂತರ ಉಳಿಕೆಯಾಗಿರುವ ಸಕ್ಕರೆ ಎತ್ತುವಳಿ ಮಾಡಿ ಕಾಯ್ದಿರಿಸಿಕೊಳ್ಳಲು ಸೂಚಿಸಿರುತ್ತಾರೆ.

ಮಾನ್ಯ ಆಯುಕ್ತರು ಇವರ ನಿರ್ದೇಶನಗಳಂತೆ ಜಿಲ್ಲೆಯ ಗ್ರಾಮಾಂತರ ಪ್ರದೇಶದ ಭಾವಚಿತ್ರ ಹೊಂದಿರುವ 39037 ಅಂತ್ಯೋದಯ ಮತ್ತು 206214 ಅಕ್ಷಯ ಪಡಿತರ ಚೀಟಿಗಳಿಗೆ ಸಕ್ಕರೆ ತಲಾ 2 ಕೆ.ಜಿ.ಯಂತೆ ವಿತರಿಸಲು ತಾಲೂಕುವಾರು ಈ ಕೆಳಗಿನಂತೆ ಮರು ಹಂಚಿಕೆ ಮಾಡಲಾಗಿದೆ.

(ಪ್ರಮಾಣ ಕ್ವಿಂಟಲ್‌ಗಳಲ್ಲಿ)

| ಕ್ರ.ಸ | ತಾಲೂಕಿನ ಹೆಸರು | ಪಡಿತರ ಚೀಟಿಗಳ ಸಂಖ್ಯೆ | | | | ಸಕ್ಕರೆ ಬೇಡಿಕೆ | ಹಿಂದಿನ ತಿಂಗಳ ಶಿಲ್ಕು | ಹಂಚಿಕೆ | ಕಾಯ್ದಿರಿಸಿದೆ. |
|---|---|---|---|---|---|---|---|---|---|
| | | AAY | ಅಕ್ಷಯ | ನೆಮ್ಮದಿ ಅಕ್ಷಯ | ಒಟ್ಟು | | | | |
| 1 | ರಾಯಚೂರು | 8912 | 23654 | 15031 | 47597 | 951.94 | 1999.04 | -1047.10 | 1047.10 |
| 2 | ಸಿಂಧನೂರು | 7326 | 27789 | 21723 | 56838 | 1136.76 | 1500.00 | -363.24 | 363.24 |
| 3 | ಮಾನವಿ | 7900 | 23083 | 17860 | 48843 | 976.86 | 1422.75 | -445.89 | 445.89 |
| 4 | ಲಿಂಗಸೂಗೂರು | 7678 | 25385 | 18769 | 51832 | 1036.64 | 1515.00 | -478.36 | 478.36 |
| 5 | ದೇವದುರ್ಗ | 7221 | 21006 | 11914 | 40141 | 802.82 | 1352.00 | -549.18 | 549.18 |
| | **ಒಟ್ಟು** | **39037** | **120917** | **85297** | **245251** | **4905.02** | **7788.79** | **-2883.77** | **2883.77** |

**ಪುಟ 2 ಕ್ಕೆ ...**

**<u>ವಿಶೇಷ ಸೂಚನೆಗಳು</u>**

1) ತಾಲೂಕಾ ಪಂಚಾಯತಿನ ಕಾರ್ಯನಿರ್ವಾಹಕ ಅಧಿಕಾರಿಗಳು ತಮ್ಮ ವ್ಯಾಪ್ತಿಯಲ್ಲಿ ಬರುವ ಗ್ರಾಮಾಂತರ ಪ್ರದೇಶದ ಅಂತ್ಯೋದಯ ಮತ್ತು ಅಕ್ಷಯ ಪಡಿತರ ಚೀಟಿಗಳಿಗೆ ತಲಾ 2ಕೆ.ಜಿ.ಯಂತೆ ದರ ಪ್ರತಿ ಕೆಜಿ ರೂ 13.50 ರಂತೆ ಹಾಗೂ ನ್ಯಾಯ ಬೆಲೆ ಅಂಗಡಿಗಳಲ್ಲಿರುವ ಸಕ್ಕರೆಯ ಅಂತಿಮ ದಾಸ್ತಾನನ್ನು ಕಡ್ಡಾಯವಾಗಿ ಕಡಿತಗೊಳಿಸಿ ಅಂಗಡಿವಾರು ಮರು ಹಂಚಿಕೆಗೆ ಕ್ರಮ ತೆಗೆದು ಕೊಳ್ಳತಕ್ಕದ್ದು ಮತ್ತು ಹಂಚಿಕೆ ಆದೇಶ ಪ್ರತಿಯನ್ನು ಕೂಡಲೆ ಈ ಕಛೇರಿಗೆ ಸಲ್ಲಿಸಲು ಸೂಚಿಸಿದೆ.
2) ನ್ಯಾಯ ಬೆಲೆ ಅಂಗಡಿಯವರು ತಾಲೂಕ ಸಗಟು ಕೇಂದ್ರದಿಂದ ಸಕ್ಕರೆಯನ್ನು ಎತ್ತುವಳಿ ಮಾಡಲು ಕೊನೆಯ ದಿನಾಂಕ 30-05-2010ರಂದು ನಿಗದಿ ಪಡಿಸಲಾಗಿದೆ .
3) ಪ್ರಸಕ್ತ ಮಾಹೆಗೆ ನೀಡಿರುವ ಲೆವಿ ಸಕ್ಕರೆ ಎತ್ತುವಳಿಗೆ ಕೇಂದ್ರ ಸರ್ಕಾರ ಕೊನೆಯ ದಿನಾಂಕ:20-05-2010ರಂದು ನಿಗದಿ ಪಡಿಸಿದ್ದು, ಜಿಲ್ಲಾ ವ್ಯವಸ್ಥಾಪಕರು ಕೆ.ಎಫ್.ಸಿ.ಎಸ್.ಸಿ. ರಾಯಚೂರು ಇವರು ನಿಗದಿತ ಅವಧಿಒಳಗೆ ಆಯುಕ್ತರು ಹಂಚಿಕೆ ಮಾಡಿರುವ ಸಕ್ಕರೆಯನ್ನು ಪೂರ್ಣವಾಗಿ ಸಂಬಂಧಪಟ್ಟ ಸಕ್ಕರೆ ಕಾರ್ಖಾನೆಗಳಿಂದ ಎತ್ತುವಳಿ ಮಾಡಿ ಆಯಾ ತಾಲೂಕಿನ ಸಗಟು ಕೇಂದ್ರದಲ್ಲಿ ಸಂಗ್ರಹಿಸಲು ಹಾಗೂ ಕಾಯ್ದಿರಿಸಿಕೊಳ್ಳಲು ಸೂಚಿಸಲಾಗಿದೆ.
4) **<u>ಭಾವಚಿತ್ರ ಸರೆಹಿಡಿಯಲಾದ ಕುಟುಂಬಗಳಿಗೆ ಮಾತ್ರ ಸಕ್ಕರೆಯನ್ನು ವಿತರಿಸಲು ಸೂಚಿಸಲಾಗಿದೆ.</u>**
5) ನ್ಯಾಯ ಬೆಲೆ ಅಂಗಡಿವಾರು ಹಂಚಿಕೆ ಆದೇಶದ ಪ್ರತಿಯನ್ನು ಸಂಬಂಧಿಸಿದ ಪ್ರಜಾ ಪ್ರತಿ ನಿಧಿಗಳಿಗೆ, ಜಾಗೃತ ಸಮಿತಿಯ ಸದಸ್ಯರಗಳಿಗೆ ನೀಡಲು ಹಾಗೂ ಸಾರ್ವಜನಿಕ ಸಂಪರ್ಕವುಳ್ಳ ಕಛೇರಿಗಳಲ್ಲಿ ಪ್ರಕಟಿಸಲು ಮತ್ತು ಮಾಧ್ಯಮಗಳ ಮೂಲಕ ಪ್ರಚಾರ ಪಡಿಸಲು ಕ್ರಮ ವಹಿಸುವಂತೆ ಜಿಲ್ಲೆಯ ಎಲ್ಲಾ ಕಾರ್ಯ ನಿರ್ವಾಹಕ ಅಧಿಕಾರಿಗಳಿಗೆ ತಿಳಿಸಿದೆ.

ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳ ಪರವಾಗಿ
ಜಿಲ್ಲಾ ಪಂಚಾಯತ ರಾಯಚೂರು

**<u>ಪ್ರತಿಯನ್ನು ಅಗತ್ಯ ಕ್ರಮಕ್ಕಾಗಿ ಕೊಡಲಾಗಿದೆ.</u>**

1) ಜಿಲ್ಲೆಯ ಎಲ್ಲಾ ತಾಲೂಕಾ ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ
2) ಜಿಲ್ಲಾ ವ್ಯವಸ್ಥಾಪಕರು ಕೆ.ಎಫ್.ಸಿ.ಎಸ್.ಸಿ.ರಾಯಚೂರು
3) ಜಿಲ್ಲಾ ವ್ಯವಸ್ಥಾಪಕರು ಎಫ್.ಸಿ.ಐ.ರಾಯಚೂರು
4) ಜಿಲ್ಲೆಯ ಎಲ್ಲಾ ಕೆ.ಎಫ್.ಸಿ.ಎಸ್.ಸಿ. ಗೋದಾಮು ವ್ಯವಸ್ಥಾಪಕರು
5) ಸಂಬಂಧಿಸಿದ ಸಕ್ಕರೆ ಕಾರ್ಖಾನೆಗಳ ವ್ಯವಸ್ಥಾಪಕ ನಿರ್ದೇಶಕರುಗಳಿಗೆ
6) ಈ ಕಛೇರಿಯ ಲೆಕ್ಕಾಅಧಿಕ್ಷಕರಿಗೆ

**<u>ಗೌರವ ಪೂರ್ವಕವಾಗಿ ಮಾಹಿತಿಗಾಗಿ ಸಲ್ಲಿಸಿದೆ.</u>**

1) ಮಾನ್ಯ ಆಯುಕ್ತರು ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಬೆಂಗಳೂರು
2) ಸನ್ಮಾನ್ಯ ಲೋಕಸಭಾ ಸದಸ್ಯರು ರಾಯಚೂರು ಮತ್ತು ಕೊಪ್ಪಳ ಇವರಿಗೆ
3) ಜಿಲ್ಲೆಯ ಎಲ್ಲಾ ಸನ್ಮಾನ್ಯ ವಿಧಾನ ಸಭಾ ಸದಸ್ಯರವರಿಗೆ
4) ಮಾನ್ಯ ಅಧ್ಯಕ್ಷರು ಜಿಲ್ಲಾ ಪಂಚಾಯತ ರಾಯಚೂರು ಇವರಿಗೆ
5) ಜಿಲ್ಲೆಯ ವಿಧಾನ ಪರಿಷತ ಸದಸ್ಯರವರಿಗೆ

ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳ ಪರವಾಗಿ
ಜಿಲ್ಲಾ ಪಂಚಾಯತ ರಾಯಚೂರು